ಕಣ್ಣಂಚಿನಲ್ಲಿ ನೀರು ಜಿನುಗಿತು.

'ಈ ಅವಮಾನ ಹಿಂಸೆಯನ್ನೆಲ್ಲಾ ನಾನು ಸಹಿಸಿಕೊಂಡಿರ್ಬೇಕು. ಅವರಿಗೆ ಯಾವ ನೋವು ಇದ್ದ ಹಾಗಿಲ್ಲ' ಗಂಡನನ್ನು ಹಳಿದಂತೆ ಮಾತನಾಡಿದರೆನ್ನುವುದು ಬಲ್ಲ. ಕೆಲವೊಂದು ಅನುಮಾನಗಳು ಅವನನ್ನು ಕಾಡದಿರಲಿಲ್ಲ. ಅವನ್ನೆಲ್ಲಾ ಪರಿಹರಿಸಿಕೊಳ್ಳುವುದಕ್ಕೆ ಇದು ಸರಿಯಾದ ದಾರಿ ಅನಿಸಿತು.

'ನಿಮ್ಮ ಕಾರ್ಯ ನಾನು ನೆರವೇರಿಸಿಕೊಡುತ್ತೇನೆ. ಆದರೆ ನೀವು ನನ್ನ ಕೆಲವೊಂದು ಪ್ರಶ್ನೆಗೆ ಉತ್ತರಿಸಬೇಕು' ಆಕೆಯ ಕಣ್ಣುಗಳನ್ನು ದಿಟ್ಟಿಸುತ್ತಲೇ ಕೇಳಿದ. ಅವರ ಕಣ್ಣುಗಳಲ್ಲಿ ನೂರು ವೋಲ್ಟ್‌ನ ಬಲ್ಬ್ ಹೊತ್ತಿಕೊಂಡಂತೆ ಬೆಳಕು ಮೂಡಿತು.

'ಯಾಕೆ ಆ ಮಾತು ಕೇಳ್ತೀಯಾ? ನಿನಗೇನು ಮಾಹಿತಿ ಬೇಕು ಕೇಳು. ನಾಲ್ಕು ಗೋಡೆಯ ಮಧ್ಯೆ ಹುಚ್ಚಿ ನಾನು. ನನಗೆ ಗೊತ್ತಿರುದೆಲ್ಲಾ ಹೇಳ್ತೀನಿ' ನೋವಿನ ಜೊತೆಗೆ ಉತ್ಸಾಹವೂ ಇತ್ತು ಮಾತಿನಲ್ಲಿ.

ಕಿರಣ ಅವರ ಜೊತೆಗೆ ಮಾತನಾಡುತ್ತಲೇ ಒಂದು ಬೀರುವಿನ ಬಾಗಿಲು ತೆರೆದ. ಮೇಲಿನ ಭಾಗದಲ್ಲಿ ನಾವಿನ್ಯ ಮಾದರಿಯ ಬಟ್ಟೆ ಬರೆಗಳನ್ನು ಒಪ್ಪವಾಗಿ ಜೋಡಿಸಲಾಗಿತ್ತು. ಕಾಶಮ್ಮನ ಕಣ್ಣುಗಳು ಅತ್ತ ಸರಿದವು.

'ನೀಲಿ ಬಣ್ಣ ಅಂದ್ರೆ ಲಹರಿಗೆ ತುಂಬಾ ಇಷ್ಟ. ಅವಳ ಸಂಗ್ರಹದಲ್ಲಿ ಇರುವಂತದ್ದು ಕೂಡ ಅದೇ ಬಣ್ಣದವು'

ಕಾಶಮ್ಮನ ಮಾತುಗಳು ಸುಳ್ಳಾಗಿರಲಿಲ್ಲ. ಕಬೋರ್ಡ್‌ನ ತುಂಬಾ ನೀಲಿ ಬಣ್ಣದ ವಿವಿಧ ಶೇಡ್‌ಗಳ ಹೊಸ ನಮೂನೆಯ ಉಡುಪುಗಳೇ ತುಂಬಿದ್ದವು. ಅವುಗಳನ್ನು ಜೋಡಿಸಿಟ್ಟಿರುವಲ್ಲಿ ಅವಳ ಶ್ರದ್ಧೆ, ಆಸಕ್ತಿಗಳೆಲ್ಲ ಎದ್ದು ಕಾಣುತ್ತಿತ್ತು. ಕಿರಣನ ತಲೆಗೆ ತಕ್ಷಣವೇ ಪ್ರಶ್ನೆಯೊಂದು ಹೊಳೆಯಿತು.

'ಅವಳು ಕಣ್ಮರೆಯಾದ ದಿನ ಯಾವ ಬಣ್ಣದ ಬಟ್ಟೆ ಧರಿಸಿದ್ಲು ಅನ್ನೋದು ಗೊತ್ತಾ?' ಆ ಪ್ರಶ್ನೆಗೆ ಕಾಶಮ್ಮನ ವರ್ತನೆ ವಿಚಿತ್ರವಾಗಿತ್ತು. ಅವರು ನೇರವಾಗಿ ನಡೆದು ಹಾಸಿಗೆಯಲ್ಲಿ ಕುಸಿದಂತೆ ಕುಳಿತರು!

ಸೆರಗು ಅವರ ಬಾಯಿಯನ್ನು ಬಿಗಿ ಹಿಡಿಯಿತು. ಕಿರಣನ ಕಣ್ಣುಗಳು ಅವರನ್ನು ಸೂಕ್ಷ್ಮವಾಗಿ ಗಮನಿಸಿತು. ಬಿರುವಿನ ಬಾಗಿಲು ಹಾಗೆ ಬಿಟ್ಟು ಅವರತ್ತ ನಡೆದ.

'ಏನಾಯ್ತು?' ಸಾಂತ್ವನಿಸುವಂತೆ ಕೇಳಿದ.

ಸಮಾಧಾನ ಹೊಂದಿದವರಂತೆ ಸೆರಗನ್ನು ಕಣ್ಣಿಗೂ ಆಡಿಸಿದರು.

'ಆ ದಿನ ಅವಳು ಒಂದು ಅಚಲ ನಿರ್ಧಾರಕ್ಕೆ ಬಂದಂತಿತ್ತು. ಎಂದೂ ಇಲ್ಲದಂತೆ ನನ್ನ ಹತ್ತಿರ ಬಂದು ಏನು ಹೊಸರುಚಿ ಮಾಡಿದ್ಯಾ ಅಂತ ಕೇಳಿದ್ಲು. ನನ್ನ ಬದುಕು ಹೀಗೆ ಗೋಡೆಗಳ ನಡುವೆ ಕಳೆದು ಹೋಗುವುದು ಅವಳಿಗೆ ಇಷ್ಟವಾಗುತ್ತಿರಲಿಲ್ಲ. ನನ್ನ ಏನಾದರೂ ಹೇಳಿ ಬೇಸರ ವ್ಯಕ್ತಪಡಿಸ್ತಿದ್ಲು. ನನ್ನ ಹಾಗೆ ನಿಮ್ಮ ಬದುಕು ಆಗ್ಬಾರ್ದು. ಈ ಕೋಟೆಯೊಳಗೆ ನೀನು ಬಂಧಿ ಯಾಗ್ಬೇಡ ಅಂತಿದ್ದೆ. ಆದರೆ ಅವಳು ಅದನ್ನು ದುರುಪಯೋಗ ಮಾಡಿ ಕೊಂಡ್ಲು. ಕೊನೆಯ ದಿನ ಅವಳು ನನ್ನ ಕೈಯಿಂದ ಕ್ಯಾರೆಟ್ ಹಲ್ವ ಮಾಡ್ಸಿ ತಿಂದ್ಲು. ಆ ದಿನ ಅವಳು ತಿಳಿ ಆಕಾಶಬಣ್ಣದ ಕಾಟನ್ ಸೆಲ್ವಾರ್ ಧರಿಸಿದ್ಲು. ಯಾವತ್ತೂ ಆ ರೀತಿ ಡ್ರೆಸ್ ಮಾಡ್ಕೊಂಡು ಅಡುಗೆ ಮನೆಗೆ ಬರ್ತಾ ಇರ್ಲಿಲ್ಲ. ಆದ್ರೆ ಆ ದಿನ ವಿಪರೀತ ಮಾತನಾಡಿದ್ಲು' ಮಾತು ನಿಲ್ಲಿಸಿ ಕಣ್ಣೊರೆಸಿಕೊಂಡರು. ಅವರ ಮಾತನ್ನು ಮುಂದುವರಿಸುವಂತೆ ಕಿರಣ ಪ್ರಶ್ನೆ ಹಾಕಿದ.

'ಆ ದಿನ ಯಾರನ್ನಾದ್ರೂ ಭೇಟಿಯಾಗೋದಿಕ್ಕೆ ಹೋಗ್ತೇನೆ ಅಂದಿದ್ಲೆ?'

'ನನ್ನತ್ರ ಯಾವತ್ತೂ ಯಾವ ವಿಷಯವನ್ನು ಕೂಡ ಹೇಳ್ತಾ ಇರ್ಲಿಲ್ಲ. ನಾನು ಅವನೆಲ್ಲಾ ವಿರೋಧಿಸ್ತಿದ್ದೆ. ಇಷ್ಟಕ್ಕೂ ಅವಳ ಯಾವ ಗೆಳತಿಯರೂ ಬಂದ್ರೂ ನಾನು ಅವರು ಹೋದ ಮೇಲೆ ಅವಳನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದೆ. ಯಾಕಂದ್ರೆ, ನಾನು ಬೆಳೆದು ಬಂದ ಪರಿಸರ ಹಾಗಿತ್ತು. ಮಗಳು ದಾರಿ ತಪ್ಪಿ ನಡಿತಾಳೇನೋ ಅನ್ನುವ ಅನುಮಾನ ನನಗೆ' ಸ್ವಾತಂತ್ರ್ಯವಿಲ್ಲದ ಹೆಣ್ಣಿನ ಆತಂಕ ಸಹಜ. ಶ್ರೀಮಂತ ಬದುಕಿಗೆ ಜೀವ ತೇಯುವ ತ್ಯಾಗಮಯಿ ಹೆಣ್ಣು ಕಾಶಮ್ಮನೆನಿಸಿತು.

'ನಿಮಗೆ ಯಾರ ಮೇಲಾದರೂ ಅನುಮಾನವಿದೆಯೆ?' ಅವರ ತಲೆ ನಕಾರಾತ್ಮಕವಾಗಿ ಆಡಿತು.

'ನನ್ನ ಬಳಿ ಅಂತಹ ವಿಷಯಗಳನ್ನು ಹೇಳ್ತಾ ಇರ್ಲಿಲ್ಲ. ಒಮ್ಮೆ ಸಮುದ್ರ ದಂಡೆಗೆ ಹೋಗೋ ಆಸೆ ವ್ಯಕ್ತಪಡಿಸಿದ್ಲು. ಒಬ್ಳೇ ಹೋಗ್ತೀನಿಂದಾಗ ನಾನು ಬಲವಾಗಿ ವಿರೋಧಿಸ್ದೆ. ಆದ್ರೆ ಅವಳು ಪಟ್ಟು ಹಿಡ್ದು ಡ್ರೈವರ್‌ಗೆ ಹೇಳಿ ಬೀಚ್‌ಗೆ ಹೋಗಿದ್ಲು ಅನ್ಸುತ್ತೆ. ಹಿಂತಿರುಗುವಾಗ ಬಹಳ ಹೊತ್ತಾಗಿತ್ತು. ನಾನು ಚೆನ್ನಾಗಿ ಬೈದೆ. ಆದ್ರೆ ಅವಳ ತಂದೆ ಅವಳನ್ನು ಉತ್ತೇಜಿಸ್ತಿದ್ರು. ಈ ವಿಷಯದಲ್ಲಿ ನಂಗೂ ಅವರಿಗೂ ಬಹಳಷ್ಟು ಮಾತುಕತೆಯಾಯಿತು' ಕಿರಣನಿಗೆ ಈ ವಿಷಯವೆಲ್ಲಾ ಗೊತ್ತಿತ್ತು. ಅದನ್ನು ಭುಜಂಗೇಶರಾಯರೇ ಸ್ವತಃ ತಿಳಿಸಿದ್ದರು.

'ನಿಮ್ಮ ಪ್ರಕಾರ ಆಕೆ ಪ್ರತೀ ದಿನ ಹೊರಗೆ ತಿರುಗಾಡ್ತಾ ಇದ್ಲು' ಅರೆ ಕ್ಷಣ ಮೌನ ತಾಳಿದರು.

'ಹೌದು, ಆದ್ರೆ ಎಲ್ಲಿಗೇಂತ ಹೇಳ್ತಾ ಇರ್ಲಿಲ್ಲ'

ಕಿರಣ ಲಹರಿಯ ಕಬೋರ್ಡ್ ಅನ್ನು ಇನ್ನಷ್ಟು ಕೂಲಂಕಷವಾಗಿ ಗಮನಿಸಿದ. ಯಾವುದೇ ಸಂಶಯಾಸ್ಪದ ಮಾಹಿತಿಗಳು ಸಿಗಲಿಲ್ಲ. ಬಾಗಿಲು ಮುಚ್ಚಿ ಹಿಂತಿರುಗಿದ.

ಕೆಳಗೆ ಪಾರ್ಟಿಯ ಗದ್ದಲ ಕೇಳಿಸುತ್ತಿತ್ತು. ಮೇನಕಾ ತನಗಾಗಿ ಕಾಯುತ್ತಿರ ಬಹುದೆಂದುಕೊಂಡ. ಆದರೆ ಅನುಮಾನ ಕಾಡಿತು. ಅಲ್ಲಿಗೆ ತನ್ನ ಪ್ರವೇಶ ವಾಗುವಾಗ ಯಾವುದೋ ಧಾವಂತದಲ್ಲಿ ಮೆಟ್ಟಿಲೇರುತ್ತಿದ್ದವಳನ್ನು ಕರೆದಿದ್ದ. ಆದರೆ ಅಂತಹ ಧಾವಂತದ ಕೆಲಸ ಮೇಲೆ ಏನಿತ್ತು? ಅನುಮಾನ ಬಲವಾಗಿ ಕಾಡಿತು. ಆದರೂ ಅದನ್ನು ಗಣನೆಗೆ ತೆಗೆದುಕೊಳ್ಳದೆ ಬಾಗಿಲಿನತ್ತ ಹೆಜ್ಜೆ ಹಾಕಿದವನು ತಕ್ಷಣವೇ ನಿಂತ!

4

## ಬದಲಾದ ಮೇನಕಾ ಮೂಡ್

ಕೃತಕ ಬಣ್ಣದ ಲೋಕ ತೆರೆದುಕೊಂಡಿದ್ದ ಹಜಾರಕ್ಕಿಳಿದ ಕಿರಣ ಹಾಗೆ ನಿಂತ. ಹಜಾರದಾಚೆಗಿನ ಮುಖ್ಯ ದ್ವಾರದ ಬಳಿ ಮೇನಕಾ ಯಾರೊಂದಿಗೋ ಮಾತನಾಡುತ್ತಿರುವುದು ಕಂಡಿತು. ತಾನೆಲ್ಲೂ ಆ ಮುಖವನ್ನು ನೋಡಿದಂತಿಲ್ಲ. ದೃಷ್ಟಿ ಕದಲಿಸದೆ ಜನ ಸಮೂಹದ ನಡುವೆ ನುಸುಳಿಕೊಂಡು ಬಾಗಿಲಿನವರೆಗೂ ಬಂದ. ಮೇನಕಾ ಸ್ತಬ್ಧ ಚಿತ್ರದಂತೆ ಬಾಗಿಲಿಗೊರಗಿ ನಿಂತಿರುವುದು ಕಂಡಿತು. ಮುಖದಲ್ಲಿ ಲವಲವಿಕೆಯ ಕ್ಲೇಶವೂ ಇರಲಿಲ್ಲ. ಒಂದೆರಡು ನಿಮಿಷಗಳಲ್ಲಿಯೇ ಬದಲಾದ ಮುಖದ ವರ್ತನೆ! ಕಾರಣ ಬಲವಾದದ್ದೇ ಇರಬೇಕು? ಇಲ್ಲವಾದರೆ ಮೇನಕಾಳಂತಹ ಹೆಣ್ಣಿನ ಮುಖದಲ್ಲಿ ಬದಲಾವಣೆ ಅಸಾಧ್ಯ!

ಕಿರಣ ಬಾಗಿಲವರೆಗೂ ನಡೆದು ಹೊರಗೆ ಇಣುಕಿದ. ದಾರಿಯ ತುದಿಗೆ ಧೂಳೆಬ್ಬಿಸುತ್ತಾ ಹೋದ ವಾಹನವನ್ನು ಗುರುತಿಸದಾದ. ಅದೇ ವಾಹನದಲ್ಲಿ ಬಂದಿರುವ ವ್ಯಕ್ತಿ ಮೇನಕಾಳ ಮೂಡನ್ನು ಬದಲಾಯಿಸಿದೆ. ಸ್ತಬ್ಧ ಚಿತ್ರಕ್ಕೆ ಜೀವ ತರುವಂತೆ ಮೆತ್ತಗೆ ಕರೆದ.

ಬೆಚ್ಚಿ ಬಿದ್ದಂತೆ ತಲೆಕೊಡವಿಕೊಂಡು ಬಾಗಿಲಿಗೆ ಹಾಕಿದ ಭಾರವನ್ನು ಇಳಿಸಿದಳು ಮೇನಕಾ. ನಗು ಕೃತಕವಾದರೂ ತುಟಿಯಂಚಿನಲ್ಲಿ ಬಹಳ ಸಮಯ ನಿಲ್ಲುವಂತೆ ಮುಖ ಚಹರೆಯನ್ನು ಬದಲಾಯಿಸಿದಳು.

'ಇಲ್ಲಿಯ ಭ್ರಮಾಲೋಕ ಮರೆತು ಇನ್ನೊಂದು ಲೋಕಕ್ಕೆ ಇಳಿದಂತ್ತಿತ್ತು?' ಭೇಡಿಕೆಯ ದನಿಯಲ್ಲಂದ.

### ಸ್ವರ್ಗ ಸುಖ

ಸ್ವರ್ಗ ಎಲ್ಲಿದೆ ಎಂದು
ಗೆಳೆಯರ ಕೇಳಿದೆ;
ಮದುವೆಯಾಗು,
ಸ್ವರ್ಗ ಸುಖ ಸಿಗುತ್ತೆ ಎಂದಳು
ಮದುವೆಯಾದೆ...
ಆ ಹೊತ್ತೆ
'ಸ್ವರ್ಗವಾಸಿ'ಯಾದೆ!

★ ದೊಡ್ಡರಂಗೇಗೌಡ



ಈಶ್ವರ